**Prajavani, Bangalore, Aug 16 2012**

# ರಸಪ್ರಶ್ನೆ: ಶಿಶಿರ್, ಆಶ್ರಿತ್‌ಗೆ ಟ್ರೋಫಿ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ ಸಂಸ್ಥೆಯು ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ಆಂತರಿಕ ಶಾಲಾ ಮಟ್ಟದ 'ಟಿಸಿಎಸ್ ಐಟಿ ವಿಜ್ ' ರಸಪ್ರಶ್ನೆ ಸ್ಪರ್ಧೆಯ ಅಂತಿಮ ಸುತ್ತು ಸೋಮವಾರ ನಡೆಯಿತು.

ಅಂತಿಮ ಸುತ್ತಿನಲ್ಲಿ ಸೇಂಟ್ ಪಾಲ್ಸ್ ಇಂಗ್ಲಿಷ್ ಶಾಲೆಯ ಶಿಶಿರ್ ಉಮೇಶ್ ಮತ್ತು ಆಶ್ರಿತ್ ಎಸ್.ಭಾರದ್ವಾಜ್ ಅವರು ಟ್ರೋಫಿ ಪಡೆದುಕೊಂಡರು. ಈ ತಂಡಕ್ಕೆ ತೀವ್ರ ಪೈಪೋಟಿ ನೀಡಿದ್ದ ಕುಮಾರನ್ ಚಿಲ್ಡ್ರನ್ ಶಾಲೆಯ ಕೆ.ಅತೀತ್, ಶುಭಂ ನಂದಿ ಅವರು ದ್ವಿತೀಯ ಪ್ರಶಸ್ತಿ ಪಡೆದುಕೊಂಡರು.

ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಜ್ಯೋತಿ ಪ್ರಕಾಶ್ ಮಿರ್ಜಿ ಅವರು . 'ಈ ರೀತಿಯ ರಸಪ್ರಶ್ನೆ ಸ್ಪರ್ಧೆಯಿಂದ ಯುವ ಮಂದಿಗೆ ತಂತ್ರಜ್ಞಾನವನ್ನು ಪರಿಚಯಿಸಲು ಸಹಾಯಕವಾಗುತ್ತಿದೆ. ಪಠ್ಯೇತರ ಚಟುವಟಿಕಗಳಿಂದ ಮಕ್ಕಳು ಬೌದ್ಧಿಕವಾಗಿ ಪ್ರಬುದ್ಧರಾಗುತ್ತಾರೆ' ಎಂದು ತಿಳಿಸಿದರು.




ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ ಸಂಸ್ಥೆಯು ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ಆಂತರಿಕ ಶಾಲಾ ಮಟ್ಟದ 'ಟಿಸಿಎಸ್ ಐಟಿ ವಿಜ್' ರಸಪ್ರಶ್ನೆ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಪ್ರಥಮ ಬಹುಮಾನ ಪಡೆದ ಸೇಂಟ್ ಪಾಲ್ಸ್ ಇಂಗ್ಲಿಷ್ ಶಾಲೆಯ ಶಿಶಿರ್ ಉಮೇಶ್ ಮತ್ತು ಆಶ್ರಿತ್ ಎಸ್.ಭಾರದ್ವಾಜ್ ಅವರಿಗೆ ನಗರ ಪೊಲೀಸ್ ಕಮಿಷನರ್ ಜ್ಯೋತಿ ಪ್ರಕಾಶ್ ಮಿರ್ಜಿ ಅವರು ಸ್ಮರಣಿಕೆ ನೀಡಿದರು. ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ ಸಂಸ್ಥೆಯ ಬೆಂಗಳೂರು ಶಾಖೆಯ ಮುಖ್ಯಸ್ಥ ನಾಗರಾಜ್ ಐಜರಿ, ಹಣಕಾಸು ವಿಭಾಗದ ಅಧ್ಯಕ್ಷ ಎನ್.ಗಣಪತಿ ಸುಬ್ರಹ್ಮಣ್ಯ ಚಿತ್ರದಲ್ಲಿದ್ದಾರೆ

ಅಂತಿಮ ಸುತ್ತಿಗೆ ಆಯ್ಕೆಯಾದ ಆರು ತಂಡಗಳಿಂದ ಲ್ಯಾಪ್‌ಟಾಪ್, ಪೆನ್‌ಡ್ರೈವ್, ಇಯರ್‌ಫೋನ್ ಮತ್ತು ಟಿ–ಶರ್ಟ್‌ಗಳನ್ನು ಬಹುಮಾನವಾಗಿ ನೀಡಲಾಯಿತು. ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ ಸಂಸ್ಥೆಯ ಬೆಂಗಳೂರು ಶಾಖೆ ಮುಖ್ಯಸ್ಥ ನಾಗರಾಜ್ ಐಜರಿ; ಹಣಕಾಸು ವಿಭಾಗದ ಅಧ್ಯಕ್ಷ ಎನ್.ಗಣಪತಿ ಸುಬ್ರಹ್ಮಣ್ಯ ಇತರರು ಉಪಸ್ಥಿತರಿದ್ದರು.